



ಡಾ. ಎಸ್. ರಾಮಮೂರ್ತಿ

# 27-9-2012ರಿಂದ 3-10-2012ರವರೆಗೆ


**ಮೇಷ**

ವಾರದ ಆರಂಭದಲ್ಲಿ ಸೌಖ್ಯ. ಇಷ್ಟಾರ್ಥ ಪೂರ್ಣವಾಗುವಿಕೆ. ಕುಟುಂಬದಲ್ಲಿ ಒಮ್ಮತ. ಶ್ರಮವಿಲ್ಲದೆ ಕಾರ್ಯ. ಕ್ರಯ ವಿಕ್ರಯಗಳಲ್ಲಿ ಲಾಭ. ಆತ್ಮೀಯರೊಂದಿಗೆ ಸಮಾಲೋಚನೆ. ವಾರದ ಮಧ್ಯಭಾಗದಲ್ಲಿ ಆತಂಕ. ಪೆಟ್ಟಾಗುವ ಸಾಧ್ಯತೆ. ಅಪರಿಚಿತರಿಂದ ತೊಂದರೆ. ವೃತ್ತಿಯಲ್ಲಿ ಹಿನ್ನಡೆ. ಆರೋಗ್ಯ ವ್ಯತ್ಯಯ. ವಾರಾಂತ್ಯದಲ್ಲಿ ಅನುಕೂಲ. ಶುಭದಿನ: 28; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ


**ವೃಷಭ**

ವಾರದ ಮಧ್ಯಭಾಗದವರೆಗೂ ಅನುಕೂಲ. ಪ್ರೀತಿ ಪಾತ್ರರ ಆಗಮನ. ಉದ್ಯೋಗದಲ್ಲಿ ಅಧಿಕಾರಿಗಳಿಂದ ಪ್ರಶಂಸೆ. ಕುಟುಂಬದಲ್ಲಿ ಶಾಂತಿ. ವಿರೋಧಿಗಳಿಗೆ ಹಿನ್ನಡೆ. ಹಿತಕರ ಸಂದೇಶಗಳು. ದೇವತಾ ಕಾರ್ಯ ಯೋಜನೆ. ವಾಹನ ಸೌಖ್ಯ. ವಾರಾಂತ್ಯದಲ್ಲಿ ಬೇಸರ. ನಿರೀಕ್ಷೆಗಳು ಹುಸಿಯಾಗುವುವು. ವೃತ್ತಿಗಳಲ್ಲಿ ಹಿನ್ನಡೆ. ನಷ್ಟದ ವ್ಯವಹಾರ. ಶುಭದಿನ: 29; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ


**ಮಿಥುನ**

ವಾರದ ಆರಂಭದಲ್ಲಿ ಪೂರ್ಣ ಸಫಲವಾಗದ ಕಾರ್ಯ ಕಲಾಪಗಳು. ವ್ಯಾಪಾರದಲ್ಲಿ ಲಾಭದ ಕೊರತೆ. ಸಮಯಕ್ಕೆ ಭಾರದ ಮಿತ್ರರು. ಅಪೂರ್ಣ ಸಂದೇಶಗಳು. ವಾರದ ಮಧ್ಯಭಾಗದಿಂದ ಸಫಲತೆ. ವೃತ್ತಿ, ವ್ಯವಹಾರಗಳಲ್ಲಿ ಪ್ರಗತಿ. ಗುರು ಹಿರಿಯರಿಂದ ಸಹಾಯ, ಸಲಹೆ. ಯಂತ್ರೋಪಕರಣಗಳು ಸರಾಗವಾಗ ನಡೆಯುವುದು. ಶುಭದಿನ: 2; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ


**ಕಟಕ**

ವಾರದ ಆರಂಭದಲ್ಲಿ ಒತ್ತಡ. ಕುಟುಂಬದಲ್ಲಿ ಭಿನ್ನಾಭಿಪ್ರಾಯ. ಅಪರಿಚಿತರಿಂದ ತೊಂದರೆ. ವಾಹನಗಳ ದುರಸ್ತಿ, ಅನಾರೋಗ್ಯ. ಅಹಿತ ಸುದ್ದಿ. ವಾರದ ಮಧ್ಯಭಾಗದಿಂದ ಸಮಾಧಾನ. ಆಪ್ತರ ಸಹಾಯ. ಕೆಲಸಗಳಲ್ಲಿ ಮುನ್ನಡೆ. ವೃತ್ತಿ, ವ್ಯವಹಾರಾದಿಗಳಲ್ಲಿ ಲಾಭ. ತಕರಾರುಗಳು ಬಗೆಹರಿಯುವುದು. ಪ್ರಯಾಣದಲ್ಲಿ ನಿರಾತಂಕ. ಶುಭದಿನ: 2; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ


**ಸಿಂಹ**

ವಾರದ ಆರಂಭದಲ್ಲಿ ಶಾಂತಿ. ಸಂತಸ ನೀಡುವ ಸಂದೇಶ. ಹಿತೈಷಿಗಳಿಂದ ಸಹಾಯ. ಮಹತ್ತರ ವಿಚಾರಗಳ ಸಮಾಲೋಚನೆ. ಉದ್ಯೋಗದಲ್ಲಿ ಪ್ರಗತಿ. ಗಣ್ಯರಿಂದ ಪ್ರಶಂಸೆ. ವ್ಯವಹಾರಗಳಲ್ಲಿ ಲಾಭ. ವಾರದ ಮಧ್ಯಭಾಗದಲ್ಲಿ ಭಯ. ಅಸ್ಥಿರ ಮನಸ್ಸು. ವೃತ್ತಿ ವೈಫಲ್ಯ. ಆರೋಗ್ಯದಲ್ಲಿ ವ್ಯತ್ಯಯ. ವಾರಾಂತ್ಯದಲ್ಲಿ ಅನುಕೂಲ. ಶುಭದಿನ: 28; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ


**ಕನ್ಯಾ**

ವಾರದ ಮಧ್ಯಭಾಗದವರೆಗೂ ಮನಶಾಂತಿ. ಶ್ರಮವಿಲ್ಲದೆ ಕಾರ್ಯ ಸಿದ್ಧಿ. ಲೇವಾದೇವಿಗಳಲ್ಲಿ ನಿರೀಕ್ಷಿತ ಲಾಭ. ತಕರಾರುಗಳಲ್ಲಿ ಗೆಲುವು. ಆಟಪಾಠಗಳಲ್ಲಿ ಪ್ರಗತಿ. ಆತ್ಮೀಯರ ಆಗಮನ. ದೇವತಾ ಕೆಲಸಗಳಲ್ಲಿ ಭಾಗವಹಿಸುವಿಕೆ. ವಾರಾಂತ್ಯದಲ್ಲಿ ಅನಾವಶ್ಯಕ ತಿರುಗಾಟ. ಅಧಿಕ ಖರ್ಚು. ಉದ್ಯೋಗದಲ್ಲಿ ಹಿನ್ನಡೆ, ಅನಾರೋಗ್ಯ, ಕಲಹ. ಶುಭದಿನ: 29; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ


**ತುಲಾ**

ವಾರದ ಆರಂಭದ ಕಾರ್ಯಗಳಲ್ಲಿ ಮಧ್ಯಮ ಫಲ. ವ್ಯಾಪಾರದಲ್ಲಿ ನಿರೀಕ್ಷಿತ ಲಾಭವಿಲ್ಲ. ಓದಿನಲ್ಲಿ ಆಸಕ್ತಿ ಕಡಿಮೆ ಯಾಗುವುದು. ಹಿರಿಯರಿಂದ ಒತ್ತಡ. ಅಕಾಲ ಭೋಜನ. ವಾರದ ಮಧ್ಯಭಾಗದಿಂದ ಚೇತರಿಕೆ. ಆತ್ಮ ವಿಶ್ವಾಸ ವೃದ್ಧಿಯಾಗುವುದು. ಉದ್ಯೋಗದಲ್ಲಿ ಮುನ್ನಡೆ. ಕ್ರಯ ವಿಕ್ರಯದಲ್ಲಿ ಲಾಭ. ಶುಭವಾರ್ತೆ. ಆಪ್ತರಿಂದ ಸಹಕಾರ. ಶುಭದಿನ: 2; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ


**ವೃಶ್ಚಿಕ**

ವಾರದ ಆರಂಭದಲ್ಲಿ ಅಶಾಂತಿ. ಯಂತ್ರೋಪಕರಣಗಳಿಂದ ತೊಂದರೆ. ಕೆಲಸ ಕಾರ್ಯಗಳಲ್ಲಿ ಹಿನ್ನಡೆ. ವ್ಯಾಪಾರದಲ್ಲಿ ನಷ್ಟ. ಅನಾವಶ್ಯಕ ತಿರುಗಾಟ. ಆರೋಗ್ಯ ವ್ಯತ್ಯಯ. ವಾರದ ಮಧ್ಯಭಾಗದಿಂದ ಸೌಖ್ಯ. ತಪ್ಪುಗಳ ಅರಿವಾಗುವುದು. ಲೆಕ್ಕಪತ್ರಗಳ ಅನುಮಾನ ಬಗೆಹರಿಯುವುದು. ಉದ್ಯೋಗದಲ್ಲಿ ಮನಶಾಂತಿ. ಶುಭದಿನ: 2; ಗಣಪತಿ, ಪಾರ್ವತಿ ಅಷ್ಟೋತ್ತರ ಪಠಿಸಿ


**ಧನಸ್ಸು**

ವಾರದ ಆರಂಭದಲ್ಲಿ ಸೌಖ್ಯ. ಹಿತಕರ ಘಟನೆಗಳು. ಪತಿ ಪತ್ನಿಯರಲ್ಲಿ ಒಮ್ಮತ. ಆಟ ಪಾಠಗಳಲ್ಲಿ ಮೇಲುಗೈ. ಉದ್ಯೋಗ, ವ್ಯಾಪಾರ, ವೃತ್ತಿಗಳಲ್ಲಿ ಸಫಲತೆ. ಪ್ರಯಾಣದಲ್ಲಿ ನಿರಾತಂಕ. ಧನಲಾಭ. ವಾರದ ಮಧ್ಯಭಾಗದಲ್ಲಿ ಕಷ್ಟಗಳ ಸೇರ್ಪಡೆ, ಅನಾರೋಗ್ಯ, ಆಲಸ್ಯ. ಕೆಲಸ ಕಾರ್ಯಗಳಲ್ಲಿ ಹಾನಿ. ಕಹಿ ಸುದ್ದಿ. ವಾರಾಂತ್ಯದಲ್ಲಿ ಸುಧಾರಣೆ. ಶುಭದಿನ: 28; ಗಣಪತಿ, ದತ್ತಾತ್ರೇಯ ಅಷ್ಟೋತ್ತರ ಪಠಿಸಿ


**ಮಕರ**

ವಾರದ ಮಧ್ಯಭಾಗದವರೆಗೂ ಶಾಂತಿ, ಸಮಾಧಾನ. ಅಪೇಕ್ಷೆಯಂತೆ ಕೆಲಸ ಕಾರ್ಯ ಸಾಗುವಿಕೆ. ವ್ಯಾಪಾರದಲ್ಲಿ ನಿರೀಕ್ಷಿತ ಲಾಭ. ಸುಖಕರ ಪ್ರಯಾಣ. ಶತ್ರುಗಳಿಗೆ ಹಿನ್ನಡೆ. ಹೋರಾಟದಲ್ಲಿ ನ್ಯಾಯ ಪ್ರಾಪ್ತಿ. ಅಧ್ಯಯನದಲ್ಲಿ ಪ್ರಗತಿ. ಶುಭ ಕಾರ್ಯ ಯೋಜನೆ. ವಾರಾಂತ್ಯದಲ್ಲಿ ಉತ್ಸಾಹ ಕುಗ್ಗುವುದು. ವೃತ್ತಿ ವ್ಯವಹಾರದಲ್ಲಿ ಹಾನಿ. ಶುಭದಿನ: 29; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ


**ಕುಂಭ**

ಒತ್ತಡ ಕಡಿಮೆಯಾಗುವುದು. ಕೆಲಸ ಕಾರ್ಯಗಳಲ್ಲಿ ಪ್ರಗತಿ. ಸಂತಸವಾಗುವ ಘಟನೆಗಳು. ಕ್ರಯ ವಿಕ್ರಯ ವ್ಯವಹಾರಗಳಲ್ಲಿ ಸೂಕ್ತ ಲಾಭ. ಹಿತೈಷಿಗಳ ಭೇಟಿ. ಹಿರಿಯರೊಂದಿಗೆ ಸಮಾಲೋಚನೆ. ವಾಹನ ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ಅಧ್ಯಯನದಲ್ಲಿ ಮೇಲುಗೈ. ಸ್ಪರ್ಧೆಗಳಲ್ಲಿ ಜಯ. ದೇವಾಲಯ ದರ್ಶನ. ಶುಭದಿನ: 1; ಗಣಪತಿ, ದತ್ತಾತ್ರೇಯ ಅಷ್ಟೋತ್ತರ ಪಠಿಸಿ


**ಮೀನ**

ವಾರದ ಆರಂಭದಲ್ಲಿ ಅಶಾಂತಿ. ಆರೋಗ್ಯ ವ್ಯತ್ಯಯ. ಅನಿರೀಕ್ಷಿತ ನಷ್ಟ. ವೃತ್ತಿ ವ್ಯವಹಾರಗಳಲ್ಲಿ ಹಿನ್ನಡೆ. ಪೆಟ್ಟಾಗುವ ಸಂಭವ. ಕುಟುಂಬ ಸದಸ್ಯರಲ್ಲಿ ಭಿನ್ನಮತ. ವಾರದ ಮಧ್ಯಭಾಗದಿಂದ ಅನುಕೂಲ, ಅಭಿವೃದ್ಧಿ. ಆಪ್ತರ ಆಗಮನ. ಖರ್ಚು ನಿಯಂತ್ರಣಕ್ಕೆ ಬರುವುದು. ಶ್ರಮ ವಿಲ್ಲದೆ ಕಾರ್ಯ ಸಾಧನೆ. ವ್ಯಾಪಾರದಲ್ಲಿ ಸೂಕ್ತ ಲಾಭ. ಶುಭದಿನ: 30; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ